## ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

*ಎಸ್.ಸಿ.* 160/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರಾಮು | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಬಸವಶೆಟ್ಟಿ | | **01.08.2024** |
| **ವಯಸ್ಸು** | ಃ **36 ವರ್ಷ** | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ **02** |
| **ವಾಸಸ್ಥಳ** | ಃ ಹೆಮ್ಮರಗಾಲ | **ಚಾ.ಸಾ.** | ಃ **02** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈಗ ಅಂದಾಜು *2* ವರ್ಷಗಳ ಹಿಂದೆ ಮಹೇಶ ಬಿನ್ ಸಿದ್ದರಾಜು ಎನ್ನುವ ಹುಡುಗ ಹಳೇಪುರ ಕೆರೆಯ ಬಳಿ ಮರಣಹೊಂದಿದ ಬಗ್ಗೆ ಮಹಜರ್ ಮಾಡುತ್ತಿದ್ದಾಗ ಮಹಜರ್ ಗೆ ನನ್ನ ಸಹಿ ಪಡೆದಿದ್ದರು. ಆ ಮಹೇಶ್ ಎನ್ನುವ ಹುಡುಗ ಯಾವ ರೀತಿ ಮರಣಹೊಂದಿದ್ದ ಎಂದು ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಮಹೇಶನ ಹೆಣ ದೊರೆತಿದ್ದ ಸ್ಥಳವನ್ನು ಪೋಲೀಸರಿಗೆ ಯಾರು ತೋರಿಸಿದ್ದರು ಎಂದು ಗೊತ್ತಿಲ್ಲ. ಆ ಕಾಲಕ್ಕೆ ಬೇರೆ ಯಾರು ಆ ಮಹಜರ್ ಗೆ ಸಹಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಸಿದ್ದರಾಜು ಹಾಜರಿದ್ದನೋ ಇಲ್ಲವೊ ನನಗೆ ಗೊತ್ತಿಲ್ಲ. ಆ ಸ್ಥಳದಲ್ಲಿ ನನ್ನ ಸಮಕ್ಷಮ ಏನನ್ನು ಮಾಡಿರಲಿಲ್ಲ ಕೇವಲ ಸಹಿಯನ್ನು ಮಾತ್ರ ಪಡೆದಿದ್ದರು. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈಗ ನಾನು ನೋಡುತ್ತಿರುವ ನಿ.ಪಿ*–5* ಮತ್ತು *6* ಪೊಟೋಗಳಲ್ಲಿ ನಾನು ಇಲ್ಲ.

ನಿ.ಪಿ–*7* ಪೊಟೋದಲ್ಲಿರುವಂತೆ ಆ ಸ್ಥಳದಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ನಿ.ಪಿ–*2* ಮಹಜರ್ ಆ ಸ್ಥಳದಲ್ಲಿ ನಾನು ಸಹಿ ಮಾಡಿದ್ದ ಮಹಜರ್ ಇದೆ. ಸದರಿ ಸಹಿಯನ್ನು ನಿ.ಪಿ–*2(ಬಿ)* ಎಂದು ಗುರುತಿಸಿದೆ.

*2.* ಈಗ ನಾನು ನೋಡುತ್ತಿರುವ ನಿ.ಪಿ–*3* ರಲ್ಲಿರುವ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಮಾಡಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ–*4* ರಲ್ಲಿರುವ ಸಹಿ ನನ್ನದೇ ಇದ್ದು ಅದನ್ನು ಎಲ್ಲಿ ಮಾಡಿದ್ದೆ ಎಂದು ಗೊತ್ತಿಲ್ಲ. ಸದರಿ ಸಹಿಗಳನ್ನು ನಿ.ಪಿ–*3(ಬಿ)* ಮತ್ತು *4(ಬಿ)* ಎಂದು ಗುರುತಿಸಿದೆ. ಆ ಸಹಿಗಳನ್ನು ಮಾಡಿದಾಗ ಸಿದ್ದರಾಜು ಹಾಜರಿದ್ದನೋ ಇಲ್ಲವೊ ಗೊತ್ತಿಲ್ಲ. ಆ ಸಹಿಗಳನ್ನು ಮಾಡಿದಾಗ ನನ್ನ ಸಮಕ್ಷಮ ಯಾವುದೇ ವಸುತಗಳನ್ನು ವಶಕ್ಕೆ ಪಡೆದಿಲ್ಲ. ಈಗ ನಾನು ನೋಡುತ್ತಿರುವ ಇನ್ನೊಂದು ಸಹಿಯನ್ನು ಸಹ ಪೋಲೀಸ್ ಠಾಣೆಯಲ್ಲಿ ಮಾಡಿದ್ದೆ. ಸದರಿ ದಾಖಲೆ ನೋಟಿಸ್ ಇದ್ದು ಅದನ್ನು ನಿ.ಪಿ–*9* ಮತುತ ಸಹಿಯನ್ನು ನಿ.ಪಿ–*9(ಎ)* ಎಂದು ಗುರುತಿಸಿದೆ. ಚಾ.ಸಾ–*1* ಸಿದ್ದರಾಜು ಮತ್ತು ಕೋರ್ಟ್ ಮುಂದೆ ಆರೋಪಿತರು ನಮ್ಮ ಗ್ರಾಮದವರೇ ಇರುತ್ತಾರೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*3.* ಆರೋಪಿತರು ಸಿದ್ದರಾಜು ಇವರ ಮಗ ಮಹೇಶನನ್ನು ವಾಮಚಾರ ಮಾಡಿ ಕೊಲೆ ಮಾಡಿದ್ದಾರೆ ಎನ್ನುವ ಕಾರಣಕ್ಕೆ ದಾಖಲಾಗಿದ್ದ ಪ್ರಕರಣದಲ್ಲಿ ಸ್ಥಳ ಮಹಜರ್ ಗೆ ಪಂಚರಾಗಿ ಬರಬೇಕು ಎಂದು ನನಗೆ ನಿ.ಪಿ–*9* ರಂತೆ ನೋಟಿಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ.

ದಿಃ*04.01.2022* ರಂದು ನನ್ನ ಸಮಕ್ಷಮ ಹಳೇಪುರ ಗ್ರಾಮದ ಕೆರೆಯ ಬಳಿ ಸಿದ್ದರಾಜು ಇವರ ಮಗ ಮಹೇಶನ ಮೃತ ದೇಹ ದೊರಕಿದ ಸ್ಥಳ ಎಂದು ಆ ಸ್ಥಳದಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಆ ಸ್ಥಳದಲ್ಲಿದ್ದ ಬಿದಿರು ಮೊರದಲ್ಲಿದ್ದ ಮಣ್ಣಿನ ಬೊಂಬೆ, ಅರಿಶಿಣ, ಕುಂಕುಮ ಮುಂತಾದ ವಸ್ತುಗಳನ್ನು ವಶಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ. ಆ ಹೆಣ ದೊರೆತ ಸ್ಥಳದಲ್ಲಿ ಒಂದು ಬಾಟಲ್ ನೀರನ್ನು ಸಹ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ನಿ.ಪಿ*–2* ರಂತೆ ಮಹಜರ್ ಬರೆದು ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ನಿ.ಪಿ*–5* ಮತ್ತು *6* ರಂತೆ ಪೊಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಆ ಪೊಟೋಗಳಲ್ಲಿ ನಾನು ಸಹ ಇದ್ದೇನೆ ಎಂದರೆ ಸರಿಯಲ್ಲ. ನಿ.ಪಿ*–7* ರಂತೆ ಗುರುತಿಸಿರುವ ಪೊಟೋದಲ್ಲಿ ಕಾಣುವ ವಸ್ತುಗಳನ್ನು ಆ ಕಾಲಕ್ಕೆ ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ.

*4.* ಅದೇ ದಿನ ಸಂಜೆ *6.30* ರಿಂದ *7.30* ರ ಸಮಯದಲ್ಲಿ ಕುಂಬ್ರಹಳ್ಳಿ ಗ್ರಾಮದ ನಿಂಗಶೆಟ್ಟಿ ಯವರ ಜಮೀನಿನಲ್ಲಿರುವ ಜಿಂಕ್ ಶೀಟ್ ತಗಡಿನ ಮನೆಯಲ್ಲಿ ನಿಂಗಶೆಟ್ಟಿಯವರು ವಾಮಚಾರ ಮಾಡಿದ್ದ ಮನೆ ಎಂದು ಹೇಳಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಮಹಜರ್ ಕಾಲಕ್ಕೆ ನಿ.ಪಿ*–8* ರಂತೆ ಪೋಟೋ ತೆಗೆದಿದ್ದರು ಮತ್ತು ನಿ.ಪಿ*–3* ರಂತೆ ಮಹಜರ್ ಬರೆದು ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ *8* ರಿಂದ *8.45* ಕ್ಕೆ ಹೆಮ್ಮರಗಾಲದ ಈ ಪ್ರಕರಣದ *5* ನೇ ಆರೋಪಿತ ಶ್ರೀನಿವಾಸ ಶೆಟ್ಟಿ ಯವರ ಮನೆಯಲ್ಲಿ ವಾಮಚಾರಕ್ಕೆ ಉಪಯೋಗಿಸಿದ್ದ ವಿಗ್ರಹಗಳನ್ನು ಇಟ್ಟಿದ್ದ ಬಗ್ಗೆ ನಿ.ಪಿ*–4* ರಂತೆ ಮಹಜರ್ ಮಾಡಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿ.ಪಿ*–2* ರಿಂದ *4* ಮಹಜರ್ ಗಳನ್ನು

ಮಾಡಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ**

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**